ಅತ್ಯಂತ ಕಡಿಮೆ ದರದಲ್ಲಿ ಅತ್ಯುತ್ತಮ ಸೌಕರ್ಯವುಳ್ಳ ಛತ್ರ ದೊರೆಯುತ್ತದೆ.
ವಿದ್ಯಾರಣ್ಯ ಕನ್ವೆನ್ಷನ್ ಹಾಲ್
(ಸ್ಟರ್ಲಿಂಗ್ ಥಿಯೇಟರ್ ಎದುರು)
ರೂ. 50,000 + ರೂ. 15,000 ಮಾತ್ರ ಮೈಸೂರು-8
ಕಂಠಿ ಕನ್ವೆನ್ಷನ್ ಹಾಲ್
2ನೇ ಹಂತ, ವಿಶ್ವೇಶ್ವರಯ್ಯ ನಗರ, ಮೈಸೂರು-8
ರೂ. 45,000 + ರೂ. 15,000 ಮಾತ್ರ.
98452-82558,
99804-11288, 97429-83888

# ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

EAT THE BEST
SHREEDEVI SR PLANTAIN LEAF
RESTAURANT
Veg & Non-Veg
# 1979, Rajkamal Talkies Road, Mysore-1
Tel: 2428034/2420420
Andhra Food
North Indian
Tandoor
We Undertake Outdoor Catering

ಸಂಪುಟ: ೪೭, ಸಂಚಿಕೆ: ೪೩, ರಾಷ್ಟ್ರೀಯ ಶಕ ೧೯೩೯ ಶಿಶಿರ ಮಾಘ ೨೬ ● ಅಮಾವಾಸ್ಯೆ – ಶ್ರವಣ, ಗುರುವಾರ, ಫೆ.೧೫, ೨೦೧೮, ದೂರವಾಣಿ: ೨೪೪೫೫೧೦, ೨೪೪೫೫೧೮, ೨೪೪೫೫೧೫, ಫ್ಯಾಕ್ಸ್: ೨೪೪೫೫೧೩, ಪುಟ : ೧೨, ರೂ. ೩

# ಅರಣ್ಯಾಧಿಕಾರಿ ಭರವಸೆ: ದಿನಗೂಲಿಗಳ ನಿರಶನ ಅಂತ್ಯ

## ಪಿರಿಯಾಪಟ್ಟಣದಲ್ಲಿ ೮ ದಿನದಿಂದ ಉಪವಾಸ: ಮೂವರು ಅಸ್ವಸ್ಥ- ಆಸ್ಪತ್ರೆಗೆ ದಾಖಲು

ಪಿರಿಯಾಪಟ್ಟಣ,ಫೆ.೧೪– ಅರಣ್ಯ ಇಲಾಖೆಯ ದಿನಗೂಲಿ ನೌಕರರು ಉದ್ಯೋಗ ಖಾಯಂ, ಸಮವಸ್ತ್ರ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ವಲಯ ಅರಣ್ಯಾಧಿಕಾರಿ ಕಚೇರಿ ಮುಂಭಾಗ ಕಳೆದ ೮ ದಿನಗಳಿಂದ ನಡೆಸುತ್ತಿದ್ದ ಆಮರಣಾಂತ ಉಪವಾಸದಲ್ಲಿ ಬುಧವಾರ ೩ ಮಂದಿ ದಿನಗೂಲಿ ನೌಕರರು ಅಸ್ವಸ್ಥಗೊಂಡು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಾದ ಹಿನ್ನೆಲೆಯಲ್ಲಿ ಬಿಗುವಿನ ವಾತಾವರಣ ಉಂಟಾಗಿತ್ತು.

ವಿಷಯ ತಿಳಿದ ಸಿಪಿಐ ಎಚ್.ಎನ್.ಸಿದ್ದಯ್ಯ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದರು. ಪರಿಸ್ಥಿತಿಯ ತೀವ್ರತೆ ಅರಿತ ಬಳಿಕ ವಲಯ ಅರಣ್ಯಾಧಿಕಾರಿ ಆರ್.ಗಿರೀಶ್ ಅವರನ್ನು ಸ್ಥಳಕ್ಕೆ ಕರೆಸಿಕೊಂಡರು. ಪ್ರತಿಭಟನಾಕಾರರ ಜತೆ ಅರಣ್ಯಾಧಿಕಾರಿಗಳು ಮಾತುಕತೆ ನಡೆಸಿ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ ಬಳಿಕ ಪ್ರತಿಭಟನಾಕಾರರು ಉಪವಾಸ ಕೈಬಿಟ್ಟು ಪ್ರತಿಭಟನೆ ಹಿಂತೆಗೆದುಕೊಂಡರು.

ಈ ಸಂದರ್ಭ ನೌಕರರ ಸಂಘದ ರಾಜ್ಯಾಧ್ಯಕ್ಷ ಎ.ಎಂ.ನಾಗರಾಜ್ ಅವರೊಡನೆ ಅಧಿಕಾರಿಗಳು ಮಾತನಾಡಿದರು.

⏭ ೮

### ಶಾಸಕರ ನಿರ್ಲಕ್ಷ್ಯಕ್ಕೆ ಬೇಸರ

ದಿನಗೂಲಿ ನೌಕರರು ಉಪವಾಸ ನಡೆಸುತ್ತಿದ್ದ ಸ್ಥಳದ ಪಕ್ಕದಲ್ಲೇ ಇದ್ದ ತಮ್ಮ ಕಾರ್ಯಾಲಯಕ್ಕೆ ಶಾಸಕ ಕೆ.ವೆಂಕಟೇಶ್ ಅವರು ಬಂದರೂ ಪ್ರತಿಭಟನಾನಿರತರನ್ನು ಸೌಜನ್ಯಕ್ಕೂ ಭೇಟಿ ಮಾಡಲಿಲ್ಲ. ಸಮಸ್ಯೆಗಳನ್ನೂ ಆಲಿಸಲಿಲ್ಲ. ಶಾಸಕರು ದಿನಗೂಲಿಗಳನ್ನು ಹೀಗೆ ನಿರ್ಲಕ್ಷಿಸಿರುವುದು ಬಹಳ ನೋವುಂಟು ಮಾಡಿದೆ.

–ಗಣೇಶ್, ಕಾರ್ಯದರ್ಶಿ, ದಿನಗೂಲಿ ನೌಕರರ ಸಂಘ

- ೧೦ ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂ ಮಾಡಬೇಕು
- ವಾರದ ರಜೆ, ಗುರುತಿನ ಚೀಟಿ, ಸಮವಸ್ತ್ರ ಒದಗಿಸಬೇಕು



ಉಪವಾಸದಿಂದಾಗಿ ಅಸ್ವಸ್ಥರಾದ ದಿನಗೂಲಿ ನೌಕರರಾದ ನಂಜಶೆಟ್ಟಿ, ವೈರಮುಡಯ್ಯ, ಎಚ್.ಕೆ.ರಮೇಶ ಅವರನ್ನು ಪಿರಿಯಾಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ.

# ಕಾಂಗ್ರೆಸ್‌ಗೆ ರಾಹುಲ್ ನವಚೈತನ್ಯ

## ಮುಖ್ಯಮಂತ್ರಿ ಸಿದ್ದರಾಮಯ್ಯ ಶಕ್ತಿ ವೃದ್ಧಿಸಿದ ಜನಾಶೀರ್ವಾದ ಯಾತ್ರೆ

ಮೈಸೂರು,ಫೆ.೧೪– ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ ಅವರು, ರಾಜ್ಯದಲ್ಲಿ ೪ ದಿನಗಳ ಕಾಲ 'ಜನಾಶೀರ್ವಾದ ಯಾತ್ರೆ' ಬ್ಯಾನರ್‌ನಲ್ಲಿ ಮಿಂಚಿನ ಸಂಚಾರ ನಡೆಸಿ ಜನರೊಂದಿಗೆ ಬೆರೆತು ಸಂವಾದ ನಡೆಸಿರುವುದು, ಸಾರ್ವಜನಿಕ ವೇದಿಕೆಗಳಲ್ಲಿ ಉತ್ಸಾಹದಿಂದ ಮಾತನಾಡಿರುವುದು, ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿರುವುದು ರಾಜ್ಯದ ಕಾಂಗ್ರೆಸ್ಸಿಗರಲ್ಲಿ ಹೊಸ ಹುರುಪು ತುಂಬಿದೆ. ಜತೆಗೆ ರಾಜ್ಯ ರಾಜಕಾರಣದಲ್ಲಿ ಸಂಚಲನವನ್ನೂ ಉಂಟು ಮಾಡಿದೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಶಕ್ತಿಯನ್ನೂ ಹೆಚ್ಚಿಸಿದೆ. ಜತೆಗೆ ರಾಜ್ಯದ ಕಾಂಗ್ರೆಸ್ ಮುಖಂಡರಲ್ಲಿ ಒಗ್ಗಟ್ಟು ಮೂಡಿಸುವಲ್ಲಿಯೂ ಯಶಸ್ವಿಯಾಗಿದೆ. ಅದರಲ್ಲೂ ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಬಲ ವೃದ್ಧಿಯಾಗಿದೆ.

ಜನಾಶೀರ್ವಾದ ಯಾತ್ರೆಗೆ ದೊರೆತ ಜನಬೆಂಬಲ, ಹೋದಲ್ಲೆಲ್ಲಾ ಜನರು ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಿದ್ದುದು, ರೋಡ್ ಶೋಗೆ ವ್ಯಕ್ತವಾದ ಸ್ಪಂದನೆಯಿಂದ ಸ್ವತಃ ರಾಹುಲ್ ಗಾಂಧಿ ಖುಷಿಯಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುವ ಭರದಲ್ಲಿ ಸಿದ್ದರಾಮಯ್ಯ ಅವರ ಆಡಳಿತವನ್ನು ಹಾಗೂ ಅವರ ಕಾರ್ಯತತ್ಪರತೆಯನ್ನು ನೋಡಿ ಕಲಿಯಿರಿ ಎಂದು ರಾಹುಲ್ ಗಾಂಧಿ ಅವರು ಭಾಷಣದ ವೇಳೆ ಹೇಳಿದ ಮಾತುಗಳು ರಾಜ್ಯ ಸರ್ಕಾರದ ಸಾಧನೆಗೆ ಮೆಚ್ಚು ನುಡಿಯಂತೇ ಇವೆ. ಇದೆಲ್ಲವೂ ರಾಜ್ಯ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಅವರ ನಾಯಕತ್ವವನ್ನು ಮತ್ತಷ್ಟು ಗಟ್ಟಿಗೊಳಿಸಿದಂತಾಗಿದೆ. ಒಟ್ಟಾರೆಯಾಗಿ ರಾಹುಲ್ ಯಾತ್ರೆಯು ಕಾಂಗ್ರೆಸ್ ಪಾಲಿಗೆ ನವಚೈತನ್ಯವನ್ನು ನೀಡಿದೆ.

ಜನಾಶೀರ್ವಾದ ಯಾತ್ರೆ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಮತ್ತು ಬಿಜೆಪಿ ವಿರುದ್ಧ ರಾಹುಲ್ ಗಾಂಧಿ ಅವರು ನಡೆಸಿದ ವಾಗ್ದಾಳಿ ಹಾಗೂ ಜನಸಾಮಾನ್ಯರಂತೆ ಹಳ್ಳಿಗಳಲ್ಲಿ ಪೆಟ್ಟಿಗೆ ಅಂಗಡಿಯ ಅಂಗಳದಲ್ಲಿ ಕುಳಿತು ಬಜ್ಜಿ, ಮಂಡಕ್ಕಿ, ಟೀ ಸವಿದದ್ದು ಕಾಂಗ್ರೆಸ್ ಅಧ್ಯಕ್ಷರನ್ನು ಜನರಿಗೆ ಮತ್ತಷ್ಟು ಹತ್ತಿರವಾಗಿಸಿದೆ. ರಾಷ್ಟ್ರೀಯ ಮಟ್ಟದ ಸುದ್ದಿ ಹಾಗೂ ಚರ್ಚೆಗೂ ಗ್ರಾಸವಾಗಿದೆ ಎಂಬುದು ವಿಶೇಷ.

**ನಾಯಕತ್ವಕ್ಕೆ ಬೆಂಬಲ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೈಗೊಂಡಿದ್ದ ಸಾಧನಾ ಸಮಾವೇಶ ಯಾತ್ರೆಯ ಮಾಹಿತಿಗಳು, ದೃಶ್ಯಮಾಧ್ಯಮದಲ್ಲಿ ಪ್ರಸಾರವಾದ ವೀಡಿಯೊ ತುಣುಕುಗಳನ್ನು ವೀಕ್ಷಿಸಿದ ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಅಲ್ಲದೆ, ರಾಜ್ಯದಲ್ಲಿನ ಅವರ ನಾಯಕತ್ವಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನೂ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಾಲ್ಕು ದಿನಗಳ ಜನಾಶೀರ್ವಾದ ಯಾತ್ರೆಯಲ್ಲಿ ರಾಜ್ಯ ನಾಯಕರು ತೋರಿಸಿದ ಒಗ್ಗಟ್ಟಿನ ಬಗ್ಗೆ ರಾಹುಲ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

⏭ ೮



ಜನಾಶೀರ್ವಾದ ಯಾತ್ರೆಯ ೪ನೇ ದಿನ ರಾಹುಲ್ ಗಾಂಧಿ ಅವರು ಕೊಪ್ಪಳದ ಕುಷ್ಟಗಿಯಲ್ಲಿ ಭಾಷಣ ಮಾಡಿದರು. ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್, ಸಂಸದೀಯ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಎಸ್.ಆರ್. ಪಾಟೀಲ್ ಮತ್ತಿತರರಿದ್ದರು.

- ಅಭೂತಪೂರ್ವ ಜನಬೆಂಬಲದಿಂದ ರಾಹುಲ್ ಹರ್ಷ
- ರಾಜ್ಯ ಕಾಂಗ್ರೆಸ್ ನಾಯಕರ ಒಗ್ಗಟ್ಟಿನ ಪ್ರದರ್ಶನ
- ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕತ್ವಕ್ಕೆ ಮೆಚ್ಚುಗೆ

### ೨೪ರಿಂದ ಮುಂಬೈ ಕರ್ನಾಟಕ

ಹೈದರಾಬಾದ್ ಕರ್ನಾಟಕದ ಬಳ್ಳಾರಿ, ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್ ಭಾಗದಲ್ಲಿ ೪ ದಿನಗಳಲ್ಲಿ ಪ್ರವಾಸ ಕೈಗೊಂಡು ರಾಜ್ಯ ವಿಧಾನಸಭೆ ಚುನಾವಣೆ ಪ್ರಚಾರಕ್ಕೆ ಅಧಿಕೃತ ಚಾಲನೆ ಕೊಟ್ಟಿರುವ ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ, ೨ನೇ ಸುತ್ತಿನಲ್ಲಿ ಫೆ.೨೪, ೨೫, ೨೬ರಂದು ಮುಂಬೈ ಕರ್ನಾಟಕ ಭಾಗದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

# ನಾಳೆ ರಾಜ್ಯ ಬಜೆಟ್

ಮೈಸೂರು,ಫೆ.೧೪– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆ.೧೬ರ ಶುಕ್ರವಾರ ಮಂಡಿಸಲಿರುವ, ಪ್ರಸಕ್ತ ಕಾಂಗ್ರೆಸ್ ಸರ್ಕಾರದ ಕೊನೆಯ ಹಾಗೂ ಐದನೆಯ ಬಜೆಟ್ ಮಂಡನೆಗೆ ಅಂತಿಮ ಕಸರತ್ತು ಆರಂಭವಾಗಿದೆ.

ಮೇ ತಿಂಗಳಲ್ಲಿ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಗೆ ಮುನ್ನ ಮಂಡಿಸುವ ಬಜೆಟ್ ಇದಾಗಿರುವುದರಿಂದ ಜನಪ್ರಿಯ ಯೋಜನೆಗಳಿಗೆ ಆದ್ಯತೆ ನೀಡಲೇಬೇಕಾಗಿದ್ದು, ಅವುಗಳಿಗೆ ಅನುದಾನ ಹೊಂದಾಣಿಕೆ ಮಾಡುವುದೇ ಮುಖ್ಯಮಂತ್ರಿಗಳ ಪಾಲಿಗೆ ದೊಡ್ಡ ಸವಾಲಾಗಿದೆ. ಈಗಾಗಲೇ ನೀಡಿರುವ ಜನಪ್ರಿಯ ಯೋಜನೆಗಳಿಗೆ ಹೊರತಾಗಿ ಹೊಸ ಯೋಜನೆಗಳನ್ನು ಪ್ರಕಟಿಸುವ ಸಾಧ್ಯತೆಯಿದೆ.

ರಾಜ್ಯ ಸರ್ಕಾರಿ ನೌಕರರ ೬ನೇ ವೇತನ ಆಯೋಗದ ಶಿಫಾರಸುಗಳನ್ನು ಯಥಾವತ್ತಾಗಿ ಜಾರಿಗೊಳಿಸುವ ಜತೆಗೆ ಸರ್ಕಾರಿ ನೌಕರರ ವೇತನದಲ್ಲಿ ಶೇ.೩೦ ರಷ್ಟು ಹೆಚ್ಚಳವನ್ನು ಬಜೆಟ್‌ನಲ್ಲಿ ಘೋಷಿಸುವ ಸಾಧ್ಯತೆಗಳಿವೆ. ಅಲ್ಲದೆ, ವಸ್ತ್ರಭಾಗ್ಯ ಮತ್ತೆ ಜಾರಿಗೆ ತರುವ ಬಗ್ಗೆಯೂ ಚಿಂತನೆ ನಡೆದಿದೆ.

ಈ ಬಾರಿ ಬಜೆಟ್ ಗಾತ್ರ ೨.೧೦ ಲಕ್ಷ ಕೋಟಿ ರೂ. ಮೀರುವ ಸಾಧ್ಯತೆ ಇದೆ. ಇದರೊಂದಿಗೆ ಸಾರ್ವತ್ರಿಕ ವಿಮಾ ಯೋಜನೆಗೂ ಅನುದಾನ ಒದಗಿಸಬೇಕಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಈ ಬಾರಿ ೩೦,೦೦೦ ಕೋಟಿ ರೂ. ಮೀಸಲಿಡುವ ಬಗ್ಗೆಯೂ ಸಿಎಂ ನಿರ್ಧರಿಸಿದ್ದಾರೆ ಎಂದು ಹೇಳಲಾಗಿದೆ.

⏭ ೮



**ಜನಪ್ರಿಯ ಮುಂಗಡಪತ್ರಕ್ಕೆ ಸಿಎಂ ಸಿದ್ಧತೆ**

**ಬಜೆಟ್ ಗಾತ್ರ**

ಈ ಬಾರಿ
೨.೧೦
ಲಕ್ಷ ಕೋಟಿ ರೂ.

ಕಳೆದ ಬಾರಿ
೧.೮೦
ಲಕ್ಷ ಕೋಟಿ ರೂ.

# ಬಹಮನಿ ಸುಲ್ತಾನ, ರಾಷ್ಟ್ರಕೂಟರ ಉತ್ಸವ

ಬೆಂಗಳೂರು,ಫೆ.೧೪– ರಾಜ್ಯ ಸರ್ಕಾರ ಬಹಮನಿ ಸುಲ್ತಾನರು ಮತ್ತು ರಾಷ್ಟ್ರಕೂಟರ ಉತ್ಸವ ಆಚರಣೆಗೆ ಮುಂದಾಗಿದೆ. ಇದಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೩೦ ಕೋಟಿ ರೂ. ಹಣ ಕೂಡ ಬಿಡುಗಡೆಯಾಗಿದೆ.

ಮಾ.೪ರಿಂದ ೬ರವರೆಗೆ ಕಲಬುರಗಿ ಜಿಲ್ಲಾಡಳಿತದಿಂದ ಮಳಖೇಡದಲ್ಲಿ ನಡೆಯುವ ಬಹಮನಿ ಸುಲ್ತಾನರ ಉತ್ಸವ ಮತ್ತು ರಾಷ್ಟ್ರಕೂಟರ ಉತ್ಸವದ ಆಚರಣೆಗೆ ಸಕಲ ಸಿದ್ಧತೆಗಳಾಗಿವೆ. ಚಿಂತಕರು, ಇತಿಹಾಸಕಾರರನ್ನು ಕರೆಸಿ ಗೋಷ್ಠಿಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

ಆದರೆ, ಬಹಮನಿ ಸುಲ್ತಾನರ ಉತ್ಸವ ಆಚರಣೆಗೆ ಪ್ರತಿಪಕ್ಷ ಬಿಜೆಪಿಯಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಈ ಉತ್ಸವವನ್ನು ತೀವ್ರವಾಗಿ ವಿರೋಧಿಸುತ್ತೇವೆ. ಆಚರಣೆ ನಡೆದರೆ ರಾಜ್ಯದಲ್ಲಿ ರಕ್ತಪಾತವಾಗಲಿದೆ ಎಂದು ಬಿಜೆಪಿ ನಾಯಕರು ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಸರ್ಕಾರ ರಾಷ್ಟ್ರಕೂಟರ ಉತ್ಸವ ಆಚರಿಸಲು ಈ ಹಿಂದೆಯೇ ನಿರ್ಧರಿಸಿತ್ತು. ಆದರೆ ಈಗ ಬಹಮನಿ ಸುಲ್ತಾನರ ಉತ್ಸವ ಆಚರಣೆಗೂ ಮುಂದಾಗಿದೆ. ಹೈದರಾಬಾದ್ ಕರ್ನಾಟಕವನ್ನು ಕೇಂದ್ರೀಕೃತವಾಗಿಸಿಕೊಂಡು ಕಲಬುರಗಿ ಜಿಲ್ಲಾಡಳಿತಕ್ಕೆ ಈ ದಿನಾಚರಣೆ ನಡೆಸುವ ಅವಕಾಶ ಒದಗಿಸಿದೆ. ಇದಕ್ಕೆ ಸಕಲ ಸಿದ್ಧತೆಗಳೂ ನಡೆದಿವೆ.

⏭ ೮



- ಕಲಬುರುಗಿ ಜಿಲ್ಲಾಡಳಿತಕ್ಕೆ ೩೦ ಕೋಟಿ ರೂ. ಬಿಡುಗಡೆ
- ರಾಜ್ಯ ಸರ್ಕಾರದ ನಿರ್ಧಾರಕ್ಕೆ ಬಿಜೆಪಿ ತೀವ್ರ ವಿರೋಧ

# ಸ್ವಚ್ಛತೆ: ಜನರ ಅಭಿಪ್ರಾಯ ಸಂಗ್ರಹ

## ಪಾಲಿಕೆ ಕಡತ ನಿರ್ವಹಣೆಗೆ ಸ್ವಚ್ಛ ಸರ್ವೇಕ್ಷಣಾ ತಂಡದ ಮೆಚ್ಚುಗೆ

ಮೈಸೂರು,ಫೆ.೧೪– ನಂ.೧ ಸ್ವಚ್ಛ ನಗರಿ ಹಿರಿಮೆಯನ್ನು ಮೂರನೇ ಬಾರಿಗೆ ಅಲಂಕರಿಸಲು ತೀವ್ರ ಪೈಪೋಟಿ ನೀಡುತ್ತಿರುವ ಮೈಸೂರು ನಗರದಲ್ಲಿ ಸ್ವಚ್ಛ ಸರ್ವೇಕ್ಷಣೆಯ ೧೨ ಮಂದಿ ಅಧಿಕಾರಿಗಳ ತಂಡದ ಸಮೀಕ್ಷಾ ಕಾರ್ಯ ಮುಂದುವರಿದಿದೆ. ಜತೆಗೆ ಸಾರ್ವಜನಿಕರಿಂದಲೂ ಪ್ರತಿಕ್ರಿಯೆ ಪಡೆದುಕೊಳ್ಳುತ್ತಿದೆ.

ದೇಶದ ಯಾವುದೇ ಮಹಾನಗರ ಪಾಲಿಕೆ ಇಷ್ಟು ಅಚ್ಚುಕಟ್ಟಾಗಿ ದಾಖಲೆಗಳನ್ನಿಟ್ಟಿಲ್ಲ ಎಂದು ಸಮೀಕ್ಷಾ ತಂಡ ಪ್ರಶಂಸಿಸಿದೆ. ಒಂದೇ ಒಂದು ದಾಖಲೆಯ ಮಾಹಿತಿ ಪರಿಷ್ಕರಣೆ, ತಿದ್ದುಪಡಿ ಮಾಡದಂತೆ ವ್ಯವಸ್ಥಿತವಾಗಿ ನೀಡಿರುವುದಕ್ಕೆ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಪಾಲಿಕೆ ಮೂಲಗಳು ತಿಳಿಸಿವೆ. ೨ ದಿನಗಳಿಂದ ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರ ಕೆಲಸ, ವೇತನ ಪಾವತಿ, ಕಸ ವಿಂಗಡಣೆ, ಕಸ ವಿಲೇವಾರಿ ಮೊದಲಾದ ಹಲವು ದಾಖಲೆಗಳ ಪರಿಶೀಲನಾ ಕಾರ್ಯ ನಡೆಸಿದ್ದ ಅಧಿಕಾರಿಗಳ ತಂಡ, ೩ನೇ ದಿನವಾದ ಬುಧವಾರ, ಪಾಲಿಕೆ ಅಧಿಕಾರಿಗಳು ನೀಡಿದ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ದಿಲ್ಲಿಯಲ್ಲಿರುವ ಕೇಂದ್ರ ಕಚೇರಿಗೆ ಆನ್‌ಲೈನ್ ಮೂಲಕ ಕಳುಹಿಸಿಕೊಟ್ಟರು.

⏭ ೧೦

- ೨೮೬ ಜನರಿಗೆ ಕರೆ ಮಾಡಿದ ಅಭಿಪ್ರಾಯ ಸಂಗ್ರಹ
- ದೇವರಾಜ, ಮೀನಾ ಬಜಾರ್ ಮಾರುಕಟ್ಟೆಗೆ ಭೇಟಿ
- ಅಶೋಕ ರಸ್ತೆ, ಇರ್ವಿನ್ ರಸ್ತೆಗಳಲ್ಲಿ ಸ್ವಚ್ಛತೆ ಪರಿಶೀಲನೆ

# ಕೆಆರ್‌ಎಸ್‌ನಲ್ಲಿ ಬಿಗಿಭದ್ರತೆ

ಮಂಡ್ಯ,ಫೆ.೧೪–ತಮಿಳುನಾಡಿನ ಅಧಿಕಾರಿಗಳು ಜಿಲ್ಲೆಯ ಕೃಷ್ಣರಾಜಸಾಗರ ಜಲಾಶಯಕ್ಕೆ ಭೇಟಿ ನೀಡಲಿದ್ದಾರೆಂಬ ಗುಪ್ತಚರ ಇಲಾಖೆ ಮಾಹಿತಿ ಮೇರೆಗೆ ಕೆಆರ್‌ಎಸ್ ಅಣೆಕಟ್ಟೆ ಸುತ್ತಮುತ್ತ ಮಂಗಳವಾರ ರಾತ್ರಿಯಿಂದಲೇ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಆದರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ರಾಧಿಕಾ ಅವರು, ನಮಗೆ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ. ತಮಿಳುನಾಡು ಅಧಿಕಾರಿಗಳ ಭೇಟಿ ವಿಚಾರ ಸುಳ್ಳು ಎಂದು 'ಆಂದೋಲನ' ಪತ್ರಿಕೆಗೆ ಬುಧವಾರ ಪ್ರತಿಕ್ರಿಯಿಸಿದ್ದಾರೆ.

ಕಾವೇರಿ ತೀರ್ಪು ಯಾವಾಗ ಬೇಕಾದರೂ ಸರ್ವೋಚ್ಚ ನ್ಯಾಯಾಲಯದಿಂದ ಹೊರಬೀಳಲಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್‌ಗೆ ಬಿಗಿ ಭದ್ರತೆ ಒದಗಿಸಲಾಗಿದೆ. ಅಲ್ಲಿ ನಿತ್ಯ ಇರುವಷ್ಟೇ ಸಿಬ್ಬಂದಿ ಇದ್ದಾರೆ. ಕೆಎಸ್‌ಆರ್‌ಪಿ ತುಕಡಿಯನ್ನಷ್ಟೇ ಹೆಚ್ಚಿಸಲಾಗಿದೆ. ಚುನಾವಣೆ ದೃಷ್ಟಿಯಿಂದ ಜಿಲ್ಲೆಯ ವಿವಿಧೆಡೆ ಚೆಕ್‌ಪೋಸ್ಟ್‌ಗಳನ್ನು ನೆಲೆಗೊಳಿಸುತ್ತಿದ್ದು, ವಾಹನ ತಪಾಸಣೆಯೂ ನಡೆಯುತ್ತಿದೆ ಎಂದು ವಿವರಿಸಿದ್ದಾರೆ.

⏭ ೧೦



- ತಮಿಳುನಾಡು ಅಧಿಕಾರಿಗಳ ಭೇಟಿ ಸಾಧ್ಯತೆ
- ಯಾವುದೇ ಮಾಹಿತಿ ಇಲ್ಲ: ಎಸ್‌ಪಿ ಸ್ಪಷ್ಟನೆ

# ಪ್ರಧಾನಿ ಭೇಟಿ: ಸ್ಥಳ ಪರಿಶೀಲಿಸಿದ ಎಸ್‌ಪಿಜಿ

ಮೈಸೂರು,ಫೆ.೧೪– ಬಿಜೆಪಿ ಸಮಾವೇಶ ಹಾಗೂ ವಿವಿಧ ಕಾಮಗಾರಿಗಳ ಉದ್ಘಾಟನೆಯಲ್ಲಿ ಭಾಗವಹಿಸುವ ಸಲುವಾಗಿ ಫೆ.೧೮ ಹಾಗೂ ೧೯ರಂದು ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ವಿಶೇಷ ಭದ್ರತಾ ಪಡೆ (ಎಸ್‌ಪಿಜಿ) ಅಧಿಕಾರಿಗಳು ನಗರಕ್ಕೆ ಬುಧವಾರ ಭೇಟಿ ನೀಡಿ ಭದ್ರತೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ನಡೆಸಿದರು.

ಪ್ರಧಾನಿ ಪಾಲ್ಗೊಳ್ಳಲಿರುವ ಕಾರ್ಯಕ್ರಮ ನಡೆಯಲಿರುವ ಮಹಾರಾಜ ಕಾಲೇಜು ಮೈದಾನ, ಲಲಿತ್ ಮಹಲ್ ಹೆಲಿಪ್ಯಾಡ್, ಜೆ.ಕೆ.ಗ್ರೌಂಡ್‌ಗೆ ಬುಧವಾರ ಬೆಳಿಗ್ಗೆ ತೆರಳಿದ ಎಸ್‌ಪಿಜಿ ಎಐಜಿಪಿ ಸೋಮಯುತಿ ರಾಯ್ ನೇತೃತ್ವದ ತಂಡ ಪರಿಶೀಲನೆ ನಡೆಸಿತು. ಪ್ರಧಾನ ಮಂತ್ರಿಗಳು ಫೆ.೧೮ ಮತ್ತು ೧೯ರಂದು ಸಂಚರಿಸುವ ಮಾರ್ಗವನ್ನೂ ಎಸ್‌ಪಿಜಿ ತಂಡ ಪರಿಶೀಲಿಸಿತು. ಆ ಬಳಿಕ ಜಿಲ್ಲಾಧಿಕಾರಿ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳ ಜತೆಗೆ ಎರಡೂ ದಿನ ಭದ್ರತೆ ಕೈಗೊಳ್ಳುವುದು, ಪೊಲೀಸ್ ಸಿಬ್ಬಂದಿ ಬಳಕೆ ವಿಚಾರವಾಗಿ ಚರ್ಚಿಸಿತು. ಈ ಸಂದರ್ಭ ಸಂಸದ ಪ್ರತಾಪ ಸಿಂಹ, ಡಿಸಿ ಡಿ.ರಂದೀಪ್, ಪಾಲಿಕೆ ಅಧಿಕಾರಿಗಳು, ಡಿಸಿಪಿಗಳಾದ ವಿಕ್ರಂ ಆಮಟೆ, ವಿಷ್ಣುವರ್ಧನ್ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಜತೆಗಿದ್ದರು.

⏭ ೧೦

- ಲಲಿತ ಮಹಲ್ ಹೆಲಿಪ್ಯಾಡ್, ಜೆ.ಕೆ.ಮೈದಾನ, ಮಹಾರಾಜ ಕಾಲೇಜು ಮೈದಾನ, ರೈಲು ನಿಲ್ದಾಣ ಪರಿಶೀಲನೆ
- ಭದ್ರತಾ ವ್ಯವಸ್ಥೆ, ಪೊಲೀಸ್ ಅಧಿಕಾರಿ-ಸಿಬ್ಬಂದಿ ಬಳಕೆ ಬಗ್ಗೆ ಜಿಲ್ಲಾಡಳಿತದ ಜತೆ ಸಮಾಲೋಚನೆ



ಪ್ರಧಾನಿ ಮಾ.೧೮ರ ಭೇಟಿ ಹಿನ್ನೆಲೆಯಲ್ಲಿ ಎಸ್‌ಪಿಜಿ ಅಧಿಕಾರಿಗಳು ಮೈಸೂರಿನಲ್ಲಿ ರೈಲ್ವೆ ನಿಲ್ದಾಣದ ಬಳಿ ಬುಧವಾರ ಸ್ಥಳ ಪರಿಶೀಲನೆ ನಡೆಸಿದರು. ಸಂಸದ ಪ್ರತಾಪ ಸಿಂಹ, ಜಿಲ್ಲಾಧಿಕಾರಿ ಡಿ.ರಂದೀಪ್, ಪಾಲಿಕೆ ಅಧಿಕಾರಿಗಳು, ಡಿಸಿಪಿಗಳಾದ ವಿಕ್ರಂ ಆಮಟೆ, ವಿಷ್ಣುವರ್ಧನ್ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಜತೆಗಿದ್ದರು.

Thursday 15 February 2018
ಆಂದೋಲನ
ಸುದ್ದಿಗಾಗಿ
andolana@gmail.com

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 400
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ
THOLASI JEWELS
₹2822
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926